


ಅವಳ ಮಾತು ಮುಗಿಯುವುದರೊಳಗೆ ಅಲ್ಲಮಪ್ರಭು ಅವಳನ್ನು ಬಾಚಿ ತಬ್ಬಿಕೊಂಡು ಕೆನ್ನೆಗೆ ಮುದ್ದಿಸಿದ್ದ.

''ನಿನ್ನನ್ನು ಮದುವೆಯಾಗುತ್ತೇನೆ, ಒಪ್ಪುತ್ತೀಯ. ನನ್ನ ಬಳಿ ಮಸ್ತ್ ಹಣವಿದೆ, ಊರಲ್ಲಿ ಎರಡೆಕರೆ ಅಡಿಕೆ ತೋಟವಿದೆ ಮತ್ತು ತೋಟದಲ್ಲಿ ಒಂದು ಒಳ್ಳೆಯ ಮನೆಯಿದೆ...'' ರಮಿಸುತ್ತಾ ಕೇಳಿದ್ದ.

''ಇಲ್ಲಿ ಬಂದ ನೂರಾರು ಗಂಡಸರು ಎಷ್ಟೋ ಬಾರಿ ನನಗೆ ಈ ಮಾತನ್ನು ಹೇಳಿದ್ದಾರೆ. ಸುಖ ತೀರಿದ ಬಳಿಕ ನನ್ನ ಕಡೆ ಕತ್ತೆತ್ತಿ ಕೂಡಾ ನೋಡದೆ ಹಣ ಎಣಿಸಿ ಹೋಗಿದ್ದಾರೆ.'' ಅವಳು ಸತ್ಯವನ್ನೇ ಹೇಳಿದ್ದಳು.

ಅಲ್ಲಮಪ್ರಭು ಅವಳ ಸ್ಪರ್ಶದಿಂದ ಭಾವಪರವಶನಾಗಿದ್ದ. ಅವಳು ಅಗಾಧವಾದ ಪ್ರೀತಿಯನ್ನು ತನಗೆ ಧಾರೆಯೆರೆಯುತ್ತಿರುವಂತೆ ಅನ್ನಿಸಿತು. ''ವೇಶ್ಯೆಯರಲ್ಲೂ ಇಂಥ ಪ್ರೀತಿ, ಉತ್ಕಟತೆಗಳು ಇರುತ್ತವೆಂದು ಇದುವರೆಗೂ ತಿಳಿದಿರಲಿಲ್ಲ ನನಗೆ...'' ಎಂದವನ ಕೆನ್ನೆಗೆ ದೀರ್ಘ ಚುಂಬನ ಕೊಟ್ಟು, ''ತೆಗೆದುಕೊಳ್ಳುವ ಹಣಕ್ಕೆ ನ್ಯಾಯ ಒದಗಿಸಬೇಕಲ್ಲ. ವೃತ್ತಿಯಲ್ಲಿ ನಿಷ್ಠೆ ಇರಬೇಕು. ಆಡುತ್ತಿರುವುದು ನಾಟಕವಾದರೂ ಸಹಜತೆ ಇರಬೇಕು... ಸಿನಿಮಾಗಳಲ್ಲಿನ ಪ್ರೀತಿ, ಪ್ರೇಮಗಳನ್ನು ನೋಡಿಲ್ಲವಾ. ನಮ್ಮ ಬದುಕು ಕೂಡಾ ಥೇಟ್ ಸಿನಿಮಾದಂತೆಯೇ...'' ಅವಳ ಮಾತುಗಳು ಸಹ ಸಿಹಿ ತುಂಬಿಕೊಂಡಿದ್ದವು. ''ನನ್ನ ಪ್ರಶ್ನೆಗೆ ಉತ್ತರ ಕೊಡಲಿಲ್ಲ ನೀನು...?'' ಒತ್ತಾಯಿಸಿದ್ದ ಪ್ರೀತಿಪೂರ್ವಕವಾಗಿ. ''ಆಗಲೇ ಹೇಳಿದೆನಲ್ಲ. ಹೀಗೆ ಹೇಳಿದವರು ನೂರಾರು ಜನ ಅಂತ.'' ನಕ್ಕಳು ಮತ್ತೆ ಅವಳು. ''ಇಲ್ಲ, ನಾನು ಎಲ್ಲರಂತೆ ಅಲ್ಲ, ನೀನು ಒಪ್ಪಿದರೆ ಖಂಡಿತಾ ಮದುವೆಯಾಗುವೆ. ವೇಶ್ಯೆಯೂ ಹೆಣ್ಣಲ್ಲವೆ...'' ಪೀಡಿಸುವವನಂತೆ ಹೇಳಿದ. ''ಓಹ್, ನನಗೀಗ ಇಪ್ಪತ್ತಾರು ವರ್ಷ ವಯಸ್ಸು. ನನ್ನ ಹದಿನಾರು ವರ್ಷ ವಯಸ್ಸಿನಿಂದಲೇ ಈ ದಂಧೆಗೆ ಇಳಿದವಳು ನಾನು. ಕನಿಷ್ಠ ದಿನಕ್ಕೊಂದು ಗಿರಾಕಿಯೊಂದಿಗೆ ಮಲಗಿರುವೆನೆಂದು ಲೆಕ್ಕ ಹಾಕಿದರೂ ಹತ್ತಿರ ಹತ್ತಿರ ನಾಲ್ಕು ಸಾವಿರ ಗಂಡಸರೊಂದಿಗೆ ಮಲಗಿರುವೆನೆಂದೆ ಲೆಕ್ಕ. ಇಷ್ಟೊಂದು ಜನ ಗಂಡಸರೊಂದಿಗೆ ಮಲಗಿದರೂ ನೀವು ನನ್ನನ್ನು ಮದುವೆಯಾಗುತ್ತೇನೆಂದರೆ ಇದು ತಮಾಷೆಯಲ್ಲದೆ ಮತ್ತೇನು...'' ಅವಳು ಮಾತನಾಡುವಾಗ ಅಲ್ಲಮಪ್ರಭು ಅವಳನ್ನು ಬೆತ್ತಲೆಗೊಳಿಸಿದ್ದ. ಅವಳ ಮೈಪೂರ್ತಿ ಆವರಿಸುತ್ತಾ, ''ಸುಳ್ಳು ಹೇಳುತ್ತಿರುವೆ ನೀನು. ನಿನ್ನ ದೇಹದಲ್ಲಿ ಯಾವ ಗಂಡಸರೂ ಉಳಿಸಿಹೋದ ಕಲೆಯೂ ಇಲ್ಲವಲ್ಲ...'' ಎಂದು ಕನವರಿಸಿದ್ದ. ಒಂದಷ್ಟು ಹೊತ್ತು ಮಾತು ನಿಲ್ಲಿಸಿ ಇಬ್ಬರೂ ಸುಖದಲ್ಲಿ ನರಳಿದರು. ಅಲ್ಲಮಪ್ರಭುವಿನ ತನುಮನಗಳಲ್ಲಿ ಅವಳ ದೇಹದ ಪರಿಮಳ ಆವರಿಸಿಕೊಂಡಿತ್ತು. ತೃಪ್ತಿಯ ನಿಟ್ಟುಸಿರು ಬಿಟ್ಟು ಎದ್ದು ಕುಳಿತ. ಬೆತ್ತಲೆಯಾಗಿ ನಿಂತಿದ್ದ ಅವಳು, ''ಏನಂದೆ, ಯಾವ ಗಂಡಸರ ಕಲೆಯೂ ಇಲ್ಲವೆಂದು ಹೇಳಿದೆಯಲ್ಲ, ಈಗ ನೀನು ಉಳಿಸಿರುವ ಕಲೆ ನನ್ನ ದೇಹದ ಯಾವ ಭಾಗದಲ್ಲಿದೆ ಹೇಳು...'' ಎಂದು ನಕ್ಕಿದ್ದಳು. ಅವನು ಅವಳ ಮಾತುಗಳನ್ನು ಕಿವಿಗೆ ಹಾಕಿಕೊಳ್ಳದವನಂತೆ, ''ಆಗಲೇ ಏನು ಹೇಳಿದೆ ನೀನು? ತೃಪ್ತಿ ಪಟ್ಟ ಗಂಡಸರು ಮುಖ ಕೂಡಾ ನೋಡದೆ ಹಣ ಕೊಟ್ಟು ಹೋಗುತ್ತಾರೆಂದೆಯಲ್ಲ. ಈಗ ನಾನು ನಿನ್ನ ದೇಹದೊಂದಿಗೆ ಸುಖ ಪಟ್ಟಿದ್ದೇನೆ. ತೃಪ್ತಿ ಪಡೆದ ಮರುಕ್ಷಣವೇ ಹೇಳುತ್ತಿದ್ದೇನೆ ಕೇಳು, ನೀನು ಒಪ್ಪಿದರೆ ನಿನ್ನನ್ನು ನನ್ನ ಹೆಂಡತಿಯನ್ನಾಗಿ ಒಪ್ಪಿಕೊಳ್ಳುತ್ತೇನೆ.'' ಪಟ್ಟು ಬಿಟ್ಟಿರಲಿಲ್ಲ ಅಲ್ಲಮಪ್ರಭು.

ಅವಳು ಬಟ್ಟೆ ಧರಿಸಿ ಅವನಿಗೆ ಕುಡಿಯಲು ನೀರು ಕೊಟ್ಟಿದ್ದಳು. ''ನಿಮ್ಮ ಬಗ್ಗೆ ಮಧುಕೇಶ್ವರ ಹದಿನೈದು ದಿನಗಳ ಹಿಂದೆಯೇ ಹೇಳಿದ್ದರು. ನಾನು ಒಬ್ಬಂಟಿಯಾಗಿದ್ದರೆ ಈ ಕ್ಷಣವೇ ಉಟ್ಟ ಬಟ್ಟೆಯಲ್ಲೇ ನಿಮ್ಮೊಂದಿಗೆ ಬಂದುಬಿಡುತ್ತಿದ್ದೆ. ಆದರೆ, ನನಗೆ ಆರು ವರ್ಷದ ಮಗಳಿದ್ದಾಳೆ.